ಅರವತ್ತರ ಹತ್ತಿರ ಹತ್ತಿರ ಬಂದಿದ್ದರೂ ವೆಂಕಟರಾಯರ ಗುಂಗುರು ತಲೆಕೂದಲು ಸೊಂಪಾಗಿ, ಕಪ್ಪಾಗಿ ತುಂಬಿಕೊಂಡಿತ್ತು. ಸದಾ ಚಟುವಟಿಕೆಯ ಪ್ರತಿಫಲದ ತೆಳ್ಳನೆಯ ದೇಹ. ಬೆಳಗ್ಗೆ ಐದಕ್ಕೆ ಎದ್ದು ನಿತ್ಯಕರ್ಮಗಳನೆಲ್ಲ ಮುಗಿಸಿ, ಒಂದು ಲೋಟ ಕಾಫೀ ಕುಡಿದು, ಕನ್ನಡಕದ ಡಬ್ಬಿ, ಸಣ್ಣದೊಂದು ಕತ್ತರಿ, ಸ್ಟೇಪ್ಲರ್ ಹಾಗೂ ದಪ್ಪ ಫೈಲ್ ಇಷ್ಟನ್ನು ತೆಗೆದುಕೊಂಡು, ನೆಲದ ಮೇಲೆ ಕುಳಿತುಕೊಂಡು, ಕನ್ನಡಕವನ್ನೊಮ್ಮೆ ಬೆಳಕಿಗೆ ಹಿಡಿದು, ಕನ್ನಡಕದ ಡಬ್ಬಿಯೊಳಗಿಂದ ಮೆತ್ತನೆಯ ಬಟ್ಟೆ ತೆಗೆದು ಅದನ್ನೊಮ್ಮೆ ನಾಜೂಕಾಗಿ ಒರೆಸಿ, ಕಣ್ಣಿಗೆ ಏರಿಸುತ್ತಿದ್ದರು. ಮನೆಗೆ ಬರುತ್ತಿದ್ದ ಸರಿ ಸುಮಾರು ಹತ್ತು ದಿನ ಪತ್ರಿಕೆಗಳಲ್ಲಿನ ಸುದ್ದಿ ಸಾಗರದಲ್ಲಿ ಮುಳುಗಿ, ಮಿಂದು, ಆಳಕ್ಕೆ ಇಳಿದು, ಮೂಲೆ ಮೂಲೆಯನ್ನು ತಡಕಿ, ಒಂದೊಂದೇ ಮುತ್ತನ್ನು ಆರಿಸುವ ರೀತಿ ಎಲ್ಲ ಪತ್ರಿಕೆಗಳಲ್ಲಿನ ಮುಖ್ಯವಾದ ಅಂಕಣಗಳನ್ನು, ರಾಜ್ಯಕ್ಕೆ ಸಂಬಂಧಿಸಿದ ವರದಿಗಳನ್ನು, ಸ್ವಾರಸ್ಯಕರವಾದ ಲೇಖನಗಳ ಜೊತೆಗೆ ಸಾಹೇಬರ ಹಾಗೂ ಸಾಹೇಬರ ಖಾತೆಯ ಕುರಿತ ವಿಷಯಗಳಿದ್ದರೆ ಅದನ್ನೆಲ್ಲಾ ನಾಜೂಕಾಗಿ ಕತ್ತರಿಸಿಕೊಳ್ಳುತ್ತಿದ್ದರು. ಹಾಳೆಯಲ್ಲಿ ತಮ್ಮ ಟಿಪ್ಪಣಿಗಳನ್ನು ಬರೆದುಕೊಂಡು, ಫೈಲಿನಲ್ಲಿ ಜೋಡಿಸಿಕೊಳ್ಳುತ್ತಿದ್ದರು. ಇದಿಷ್ಟು ಕೆಲಸ ಆಗುವ ಹೊತ್ತಿಗೆ ಅಲಾರಾಂ ಟ್ರಿಂಗುಟ್ಟುತ್ತಾ ವೇಳೆ ಎಂಟು ಆಯಿತು ಎಂದನ್ನು ನೆನಪಿಸುತ್ತಿತ್ತು. ಅಷ್ಟು ಹೊತ್ತಿಗೆ ಡ್ರೈವರ್ ಜೀಪು ತೆಗೆದುಕೊಂಡು ಬಂದಿರುತಿದ್ದ. ಅವನ ಜೊತೆ ಇನ್ನೊಂದು ಡೋಸ್ ಕಾಫಿ ಹೀರಿ, ಸ್ನಾನ ಮುಗಿಸಿ ಒಂಬತ್ತಕ್ಕೆ ಸಾಹೇಬರ ಮನೆ ಸೇರಿಬಿಡುತ್ತಿದ್ದರು. ಈ ದಿನಚರಿ ಸುಮಾರು ಹದಿನೈದು–ಇಪ್ಪತ್ತು ವರ್ಷಗಳಿಂದ ನಡೆದುಕೊಂಡು ಬಂದಿತ್ತು. ಕೈಗೆ ವಾಚ್ ಕಟ್ಟದಿದ್ದರೂ ಒಂದು ದಿನವೂ ಸಮಯ ಮೀರಿ ಹೋಗಿದ್ದಿಲ್ಲ. ಮೊದಲೆಲ್ಲ ಇವರ ಸಾಹೇಬರು ಐದು ವರ್ಷಕ್ಕೊಮ್ಮೆ ಬದಲಾಗುತ್ತಿದ್ದವರು ಇತ್ತೀಚೆಗೆ ದೆಹಲಿಯ ಹವಾಮಾನಕ್ಕೆ ತಕ್ಕಂತೆ ಬದಲಾಗುತ್ತಿದ್ದರು. ಆದರೂ ಇವರ ದಿನಚರಿಯಲ್ಲಿಯಾಗಲಿ, ಜೀವನ ಶೈಲಿಯಲ್ಲಾಗಲಿ ಹೆಚ್ಚಿನ ಬದಲಾವಣೆ ಆಗಿರಲಿಲ್ಲ.

ವೆಂಕಟರಾಯರು ಪತ್ರಕರ್ತರಾಗಿ ಸುಮಾರು ದಶಕದ ಕಾಲ ದುಡಿದಿದ್ದರು. ಇವರ ಬರವಣಿಗೆಯಲ್ಲಿನ ಚತುರತೆ, ಎಂತಹ ಕ್ಲಿಷ್ಟವಾದ ವಿಚಾರವನ್ನೂ ಯಾರ ಭಾವನೆಗೂ ಧಕ್ಕೆಯಾಗದಂತೆ ಸರಳವಾಗಿ ಹಾಗೂ ಸೂಕ್ಷ್ಮವಾಗಿ ಮಂಡಿಸುತ್ತಿದ್ದ ಜಾಣ್ಮೆ, ನೇರವಾದರೂ ನಿಷ್ಠುರವಲ್ಲದ ಮಾತುಗಾರಿಕೆ, ಜಂಬವಿಲ್ಲದ ಪ್ರಾಮಾಣಿಕತೆಯನ್ನು ಮೆಚ್ಚಿ ಇವರನ್ನ ಮಾಧ್ಯಮ ಕಾರ್ಯದರ್ಶಿಯಾಗಿ ಆಗಿನ ಶಿಕ್ಷಣ ಮಂತ್ರಿಗಳು ನೇಮಿಸಿಕೊಂಡಿದ್ದರು. ಅದಾದ ಮೇಲೆ ಬೇರೆ ಬೇರೆ ಮಂತ್ರಿಗಳಿಗೆ ಮಾಧ್ಯಮ ಕಾರ್ಯದರ್ಶಿಯಾಗಿ, ಮಾಧ್ಯಮ ಸಲಹೆಗಾರರಾಗಿ ಕೆಲಸ ಮಾಡಿದ್ದರು. ಇಷ್ಟು ವರ್ಷಗಳ ಕಾಲ ರಾಜಕಾರಣದ ಸಹವಾಸವಿದ್ದರೂ ಪ್ರಭಾವಿ ಹುದ್ದೆಯಲ್ಲಿದ್ದರೂ ಸಾಕಷ್ಟು ಅವಕಾಶಗಳಿದ್ದರೂ ಸಣ್ಣದೊಂದು ಬಿಡಿಎ ನಿವೇಶನವನ್ನು ಮಾಡಿಕೊಂಡಿರಲಿಲ್ಲ. ಸಂಬಳ ಜೀವನಕ್ಕೆ ಸಾಕಾಗುವಷ್ಟು ಬರುತ್ತಿತ್ತು. ತಂಗಿಯ ಸಂಸಾರ, ಅಣ್ಣನ ವ್ಯಾಪಾರ, ಅಕ್ಕನ ಸಾಲ, ಕಷ್ಟ ಎಂದು ಬಂದವರಿಗೆ ಇಲ್ಲವೆನ್ನಲಾಗದ ಅವರ ಸ್ವಭಾವ ಎಷ್ಟೋ ಬಾರಿ ಅವರನ್ನ ಧರ್ಮಸಂಕಟಕ್ಕೆ ಈಡುಮಾಡಿತ್ತು. ಇದನ್ನ ತಿಳಿದಿದ್ದ ಎಷ್ಟೋ ಜನ ಅವರ ಒಳ್ಳೆಯ ಸ್ವಭಾವವನ್ನು ದುರುಪಯೋಗ ಮಾಡಿಕೊಂಡ ಉದಾಹರಣೆಗಳಿದ್ದವು.

ಇದೇ ವಿಚಾರವಾಗಿ ಅವರ ಮಗ ಅಪ್ಪನ ಮೇಲೆ ಆಗಾಗ ಬೇಸರಿಸಿಕೊಳ್ಳುತ್ತಿದ್ದ. ಇಂತಹ ಹುದ್ದೆಯಲ್ಲಿ ಇದ್ದು ತಮಗಾಗಿ ಒಂದಿಷ್ಟು ಆಸ್ತಿ ಅಡವು ಮಾಡಿಕೊಳ್ಳಲಿಲ್ಲವಲ್ಲ ಎಂದು ಆಗಾಗ ಗೊಣಗಾಡುತ್ತಿದ್ದ. ಅವನ ಗೊಣಗಾಟಕ್ಕೆ ಇವರಿಂದ ದಿವ್ಯ ಮೌನ, ಉದಾಸೀನವನ್ನು ಬಿಟ್ಟು ಬೇರಾವ ಪ್ರತಿಕ್ರಿಯೆ ಸಿಗುತ್ತಿರಲಿಲ್ಲ.

ಈಗ ಒಂದು ವಾರದಿಂದ ಅವರಿಗೆ ಈಗಿನ ಹೊಸ ಸಾಹೇಬರ ಒಡನಾಟ. ತೀರಾ ಅಪರಿಚಿತರೇನಲ್ಲ. ಆದರೂ ನೇರಾನೇರ ಇದೇ ಮೊದಲ ಸಲ ಅವರೊಟ್ಟಿಗೆ ಕೆಲಸ ಮಾಡುತ್ತಿದ್ದುದು.